

ರುದ್ರಪಟ್ಟಂ ಸಹೋದರರ ಕಛೇರಿಯಲ್ಲಿ ಲಾಲ್ಗುಡಿ, ಉಮಯಾಳ್ಪುರಂ ಇದ್ದಾರೆ (ಒಳಚಿತ್ರ: ಆಗಿನ ಮುಖ್ಯಮಂತ್ರಿ ಎಸ್ ಬಂಗಾರಪ್ಪ ಅವರಿಂದ ಗೌರವ ಸ್ವೀಕಾರ)

ಟಿ.ಚೌಡಯ್ಯನವರೇ ಬಹುವಾಗಿ ಮೆಚ್ಚಿಕೊಂಡಿದ್ದರು.

ತ್ಯಾಗರಾಜನ್ ಗಣಿತ ಶಾಸ್ತ್ರದಲ್ಲಿ ಎಮ್ಎಸ್ಸಿ ಪದವಿ ಪಡೆದುಕೊಂಡು, ಮೈಸೂರು, ಗುಲ್ಬರ್ಗ, ಚಿತ್ರದುರ್ಗ ಮುಂತಾದ ಸ್ಥಳಗಳಲ್ಲಿ ಆಕಾಶವಾಣಿಯ ಕಾರ್ಯ ನಿರ್ವಾಹಕ ಅಧಿಕಾರಿಗಳಾಗಿದ್ದು, ಅನಂತರ ಚೆನ್ನೈ ಹಾಗೂ ಬೆಂಗಳೂರು ದೂರದರ್ಶನದ ಉಪ ನಿರ್ದೇಶಕರಾಗಿ ನಿವೃತ್ತರಾದರು. ತಾರಾನಾಥನ್ ರಸಾಯನ ಶಾಸ್ತ್ರದಲ್ಲಿ ಎಂಎಸ್ಸಿ ಹಾಗೂ ಪಿಎಚ್‌ಡಿ ಪದವಿಗಳನ್ನು ಪಡೆದು ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ಹಿರಿಯ ವಿಜ್ಞಾನಿ. ಹೆಚ್ಚುವರಿ ನಿರ್ದೇಶಕರಾಗಿ ನಿವೃತ್ತರಾದರು. ವೃತ್ತಿಯ ಕಾರಣ ಬೇರೆ ಸ್ಥಳಗಳಲ್ಲಿ ಇದ್ದುಕೊಂಡು, ಕಛೇರಿಗಳಿಗೆ ಮಾತ್ರ ಒಂದೆಡೆ ಸೇರಿದರೂ ಅತ್ಯಾಶ್ಚರ್ಯ ಎನ್ನಿಸುವಷ್ಟು ಹೊಂದಾಣಿಕೆ ಇವರ ಗಾಯನದಲ್ಲಿತ್ತು.

ಇವರ ವಿದ್ವತ್ಪೂರ್ಣ ಸಂಗೀತದಲ್ಲಿ ಆಳವಿದೆ. ಹಿತವಾದ ಕಂಠವಿದೆ. ಸಂಗೀತವೇನಿದ್ದರೂ ಕಲೆಯ ದೃಷ್ಟಿಯಿಂದ ಮತ್ತು ತಮ್ಮ ಸಂತೋಷಕ್ಕಾಗಿ ಹೊರತು ಚಪ್ಪಾಳೆ ಗಿಟ್ಟಿಸುವ ಉದ್ದೇಶದ್ದಲ್ಲ. ಶ್ರೋತೃಗಳಿಗೆ ಸದಾ ಹೊಸತನ್ನು ನೀಡಬೇಕೆನ್ನುವುದು ಇವರ ಧ್ಯೇಯ. ಅತಿ ಕ್ಲಿಷ್ಟ ರಾಗಗಳನ್ನೂ, ವಿಸ್ತರಿಸಲು ಅವಕಾಶ ಕಡಿಮೆ ಇರುವಂತಹ ಅಥವಾ ಎಲ್ಲರಿಗೂ ಸುಲಭವಾಗಿ ದಕ್ಕದಂತಹ ದರ್ಬಾರ್, ನಾಯಕಿ, ಕನ್ನಡ, ನಳಿನಕಾಂತಿ, ರಸಾಳಿ, ಫಲಮಂಜರಿ, ಮಣಿರಂಗು ಇಂತಹ ರಾಗಗಳನ್ನು ಆಯ್ದು ನಿರಾಯಾಸವಾಗಿ ನಿರರ್ಗಳವಾಗಿ ವಿಸ್ತರಿಸಿ ಹಾಡಬಲ್ಲರು.

ಸಂಗೀತ ತ್ರಿಮೂರ್ತಿಗಳ ಅಪರೂಪದ ಕೃತಿಗಳು, ಊತ್ತುಕಾಡ್ ವೆಂಕಟಸುಬ್ಬ ಅಯ್ಯರ್ ಹಾಗೂ ಮೈಸೂರು ಮಹಾರಾಜ ಜಯಚಾಮರಾಜ ಒಡೆಯರ್ ಅವರ ಅಪರೂಪದ ಕೃತಿಗಳನ್ನು ಹಾಡಿ ಅವನ್ನು ಬೆಳಕಿಗೆ ತಂದ ಹೆಗ್ಗಳಿಕೆ ಇವರದು. ದೇಶ ವಿದೇಶಗಳಲ್ಲಿ ಇವರ ಸಂಗೀತಕ್ಕೆ ಬೇಡಿಕೆ ಇದೆ. ಪ್ರಬಲ ಸಂಗೀತ ಪರಂಪರೆಯುಳ್ಳ ತಮಿಳುನಾಡಿನಲ್ಲಿ ಇತರ ರಾಜ್ಯದ ಕಲಾವಿದರಿಗೆ ಇಂಬು ನೀಡುವುದಿಲ್ಲ ಎಂಬುದು ಪ್ರತೀತಿ. ಆದರೆ ಈ ಸಹೋದರರಿಗೆ ಅಲ್ಲಿ ಅಪಾರ ಗೌರವ ಮನ್ನಣೆಗಳು ದೊರಕಿವೆ. ಪ್ರಖ್ಯಾತ ಮೃದಂಗ ವಿದ್ವಾನ್ ಉಮಯಾಳ್ಪುರಂ ಶಿವರಾಮನ್ ಇವರ ಸಂಗೀತಕ್ಕೆ ಮನಸೋತವರು. ಪರೂರ್ ಎಂಎಸ್‌ಜಿ, ಲಾಲ್ಗುಡಿ ಜಯರಾಮನ್, ಉಮಯಾಳ್ಪುರಂ, ಪಾಲ್ಘಾಟ್ ರಘು ಮುಂತಾದ ಮಹಾನ್ ಕಲಾವಿದರಿಂದ ಈ ಸಹೋದರರಿಗೆ ಪಕ್ಕವಾದ್ಯದ ಸಹಕಾರ ದೊರಕಿದೆ.

ಸಿಂಗಾಪೂರ, ಮಲೇಷ್ಯಾ, ಇಂಗ್ಲೆಂಡ್, ಅಮೆರಿಕ ಮುಂತಾದ ದೇಶಗಳ ಆಹ್ವಾನದ ಮೇರೆಗೆ ವಿದೇಶ ಪ್ರವಾಸ ಮಾಡಿ ಕಛೇರಿಗಳನ್ನೂ, ಕಾರ್ಯಾಗಾರಗಳನ್ನೂ, ಪ್ರಾತ್ಯಕ್ಷಿಕೆಗಳನ್ನೂ ನಡೆಸಿಕೊಟ್ಟಿದ್ದೂ ಇದೆ.

ಅಮೆರಿಕದ 'ಸಿಮಾನ'ದಿಂದ ಊತ್ತುಕಾಡು ವೆಂಕಟ ಸುಬ್ಬ ಅಯ್ಯರ್ ಹಾಗೂ ಜಯಚಾಮರಾಜ ಒಡೆಯರ್ ಅವರ ಅಪರೂಪದ ಕೃತಿಗಳು, ಪಿಟ್ಸ್‌ಬರ್ಗ್ ವೆಂಕಟೇಶ್ವರ ದೇವಸ್ಥಾನದಿಂದ ದಾಸರ ಕೃತಿಗಳು ಅಲ್ಲದೆ ಇವರ ಇನ್ನೂ ಹಲವಾರು ಅಡಕ ಮುದ್ರಣಗಳು ಬಿಡುಗಡೆಯಾಗಿವೆ.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಕಲಾಶ್ರೀ, ಸ್ವರಮೂರ್ತಿ ವಿ.ಎನ್.ರಾವ್ ಚೌಡಯ್ಯ ರಾಷ್ಟ್ರ ಪ್ರಶಸ್ತಿ, ಮದ್ರಾಸ್ ಮ್ಯೂಸಿಕ್ ಅಕಾಡೆಮಿಯ 'ಅತ್ಯುತ್ತಮ ಕಚೇರಿ ಪ್ರಶಸ್ತಿ,'ಮುಸುರಿ ಸುಬ್ರಹ್ಮಣ್ಯ ಅಯ್ಯರ್ ಪ್ರಶಸ್ತಿ, 'ಅನನ್ಯ ಪುರಸ್ಕಾರ, 'ಸಂಗೀತ ವಿದ್ಯಾನಿಧಿ, 'ಸಂಗೀತ ಕಲಾ ತಪಸ್ವಿ, ಮುಂತಾದ ಬಿರುದು ಗೌರವಗಳು ಈ ಸಹೋದರರನ್ನು ಅರಸಿಕೊಂಡು ಬಂದಿವೆ. ಪ್ರಸ್ತುತ ಇವರು ಬೆಂಗಳೂರಿನಲ್ಲಿ ವಾಸವಾಗಿದ್ದು ಹಲವಾರು ಶಿಷ್ಯರಿಗೆ ಸಂಗೀತ ಶಿಕ್ಷಣ ನೀಡುತ್ತಿದ್ದಾರೆ.

ರುದ್ರಪಟ್ಟಂ ಸಹೋದರರು ಕಚೇರಿ ನೀಡಲಾರಂಭಿಸಿ ಈಗ ಆರು ದಶಕಗಳು ಪೂರೈಸಿವೆ. ಶಿಷ್ಯರು ಒಟ್ಟುಗೂಡಿ ಗುರುಗಳ ಗೌರವಾರ್ಥ ಸನ್ಮಾನ ಸಮಾರಂಭ ಏರ್ಪಾಡು ಮಾಡುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಭಾರತ ಸರ್ಕಾರವು ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪುರಸ್ಕಾರ ನೀಡಿದ್ದು ಈ ಸಹೋದರರ ಕೀರ್ತಿ ಮುಕುಟಕ್ಕೆ ಮತ್ತೊಂದು ಗರಿ ಸೇರಿಕೊಂಡಂತಾಗಿದೆ.